ದೂರವಾಣಿ ಸಂಖ್ಯೆ : 080-22212343
ಫ್ಯಾಕ್ಸ್ ಸಂಖ್ಯೆ : 080-22278803
Website : https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್.) : ಯು40109ಕೆಎ1999ಎಸ್‌ಜಿಸಿ025521
ಕಂಪನಿಯ ಅಧಿಕೃತ ಕಛೇರಿ : ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು-560 009

**ವಿಷಯ:-** ಕೋವಿಡ್-19 ಮಹಾಮಾರಿ ಹಿನ್ನೆಲೆಯಲ್ಲಿ ನಿಗಮದ ಎಲ್ಲಾ ಕಾಮಗಾರಿಗಳು/ ಸೇವೆಗಳು ಮತ್ತು ಸಾಮಾಗ್ರಿಗಳ ಸಂಗ್ರಹಣಾ ಕಾರ್ಯದ ಅನುಷ್ಠಾನದಲ್ಲಿ ಸಡಿಲಿಕೆ ನೀಡುವ ಕುರಿತು.

**ಓದಿದೆ:-**
1. ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಆಇ/360/ವೆಚ್ಚ-12/2020 (ಇ ಆಫೀಸ್) ದಿನಾಂಕ 13/07/2020.
2. ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ ಆಇ/360/ವೆಚ್ಚ-12/2020 (ಇ ಆಫೀಸ್) ದಿನಾಂಕ 09/09/2020.
3. ದಿನಾಂಕ 09/09/2020 ರಂದು ನಡೆದ 121 ನೇ ಮಂಡಳಿ ಸಭೆಯ ನಡವಳಿಗಳು.

<><><><><>

**ಪೀಠಿಕೆ:**

1. ಕೋವಿಡ್-19 ಮಹಾಮಾರಿ ಹಿನ್ನೆಲೆಯಲ್ಲಿ, ಸಿವಿಲ್ ಕಾಮಗಾರಿಗಳ ಅನುಷ್ಠಾನದಲ್ಲಿ ಸಡಿಲಿಕೆ/ರಿಯಾಯಿತಿ ನೀಡುವ ಬಗ್ಗೆ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ದಿನಾಂಕ 13/07/2020 ರ ಆದೇಶದಲ್ಲಿ ತಿಳಿಸಲಾಗಿದೆ. ಈ ಬಗ್ಗೆ, Standard Tender Document ನ Conditions of Contract ನಲ್ಲಿ Employer's risks ಮತ್ತು Compensation events ಗಳ clause ಗಳಡಿಯಲ್ಲಿ ಅವಧಿ ವಿಸ್ತರಿಸಲು ಹಾಗೂ ಒಪ್ಪಂದದ ಅನುಸಾರ ಪಡೆಯಲಾದ ಭದ್ರತಾ ಠೇವಣಿಗಳನ್ನು ಕೋವಿಡ್-19 ಮಹಾಮಾರಿ ಕಾರಣದಿಂದ ಕೆಲವು ಸಂದರ್ಭಗಳಲ್ಲಿ, ಕಾಮಗಾರಿ/ಸರಬರಾಜು ಪ್ರಮಾಣದ ಅನುಪಾತ (proportionate) ಕ್ಕೆ ಅನುಸಾರವಾಗಿ ಹಿಂದಿರುಗಿಸಲು ಆದೇಶಿಸಲಾಗಿದೆ.
2. ಮುಂದುವರೆದಂತೆ, ದಿನಾಂಕ 09/09/2020 ರ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಸುತ್ತೋಲೆಯಲ್ಲಿ ಉಲ್ಲೇಖ (1) ರಲ್ಲಿನ ಆದೇಶದಲ್ಲಿ ತಿಳಿಸಿದ ಭದ್ರತಾ ಠೇವಣಿ ಹಿಂಪಾವತಿ ಬಗ್ಗೆ, ಕೆಲವು ಸ್ಪಷ್ಟೀಕರಣಗಳನ್ನು ನೀಡಲಾಗಿದೆ.
3. ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ಕೋವಿಡ್-19 ಮಹಾಮಾರಿ ಹಿನ್ನೆಲೆಯಲ್ಲಿ ಸಿವಿಲ್ ಕಾಮಗಾರಿಗಳ ಅನುಷ್ಠಾನದಲ್ಲಿ ಸಡಿಲಿಕೆ ನೀಡಿದ್ದು, ನಿಗಮದ ಸಿವಿಲ್ ಮತ್ತು ವಿದ್ಯುತ್ ಕಾಮಗಾರಿಗಳು/ ಸರಬರಾಜು ಹಾಗೂ ಸೇವೆಗಳ ಅನುಷ್ಠಾನದಲ್ಲಿ, ಸದರಿ ಆದೇಶವನ್ನು ಅಳವಡಿಸಿಕೊಳ್ಳಲು ದಿನಾಂಕ 09/09/2020 ರಂದು ನಡೆದ 121 ನೇ ಮಂಡಳಿ ಸಭೆಯಲ್ಲಿ ಮಂಡಿಸಿ, ಎಲ್ಲಾ ಕಾಮಗಾರಿಗಳಿಗೂ ಸದರಿ ಆದೇಶವನ್ನು ಅಳವಡಿಸಿಕೊಳ್ಳಲು ಅನುಮೋದನೆ ಪಡೆಯಲಾಗಿದೆ.
4. ಈ ಹಿನ್ನೆಲೆಯಲ್ಲಿ, ಕೆಳಕಂಡಂತೆ ಆದೇಶಿಸಲಾಗಿದೆ.

**ಕವಿಪ್ರನಿನಿ/ಆದೇಶ ಸಂಖ್ಯೆ: ಬಿ9/2020/07-08/ಬೆಂಗಳೂರು** **ದಿನಾಂಕ 02/11/2020**

ಮಂಡಳಿ ಸಭೆಯ ನಡವಳಿಯನ್ವಯ ಹಾಗೂ ಸರ್ಕಾರದ ಉಲ್ಲೇಖಿತ ಆದೇಶ/ಸುತ್ತೋಲೆಯನ್ವಯ ಕೋವಿಡ್-19 ಮಹಾಮಾರಿ ಹಿನ್ನೆಲೆಯಲ್ಲಿ, ನಿಗಮದ ಕಾಮಗಾರಿಗಳು/ ಸೇವೆಗಳು ಮತ್ತು ಸಾಮಾಗ್ರಿಗಳ ಸಂಗ್ರಹಣಾ ಕಾರ್ಯದ ಅನುಷ್ಠಾನದಲ್ಲಿ, ಯಾವುದೇ ವೆಚ್ಚ ಅಥವಾ ದಂಡವಿಲ್ಲದೆ ಈ ಕೆಳಗಿನಂತೆ ಪ್ರಕರಣವಾರು ಪರಿಶೀಲಿಸಿ, ನಿರ್ದಿಷ್ಟ ಅವಧಿಗೆ, ತಾತ್ಕಾಲಿಕವಾಗಿ, **ಗುತ್ತಿಗೆ ಒಪ್ಪಂದದಲ್ಲಿ ಅವಧಿ ವಿಸ್ತರಣೆ ಮಾಡುವ ಬದಲಾವಣೆಗಳನ್ನು ಮಾತ್ರ ಅಳವಡಿಸಿಕೊಳ್ಳುವ** ಅಧಿಕಾರವನ್ನು, ಎಲ್ಲಾ ವಲಯಗಳ ಮುಖ್ಯ ಇಂಜಿನಿಯರ್ (ವಿ) ರವರುಗಳಿಗೆ ನೀಡಲಾಗಿದೆ.

- ದಿನಾಂಕ 20/02/2020 ರ ಮತ್ತು ಅದರ ನಂತರ ಗುತ್ತಿಗೆ ಹೊಣೆಗಾರಿಕೆ ಮುಕ್ತಾಯವಾಗಬೇಕಾದ ಸರಕು ಮತ್ತು ಸೇವೆಗಳು ಹಾಗೂ ಕಾಮಗಾರಿಗಳ ಒಪ್ಪಂದಗಳ ಸಂಬಂಧದಲ್ಲಿ, ಈ ಕುರಿತಾಗಿ ನಿಯಮಾನುಸಾರ ಸಂಬಂಧಪಟ್ಟ ಎಲ್ಲಾ ಪಕ್ಷಗಾರರು (parties) ಅಗತ್ಯ ಪ್ರಕ್ರಿಯೆಯನ್ನು ಪೂರೈಸುವ ಷರತ್ತಿಗೆ ಒಳಪಟ್ಟು ಕನಿಷ್ಟ 3 ತಿಂಗಳು ಹಾಗೂ ಗರಿಷ್ಟ 6 ತಿಂಗಳವರೆಗಿನ ಅವಧಿಯನ್ನು ಆಯಾ ಟೆಂಡರ್ ದಾಖಲೆಗಳಲ್ಲಿನ Clause ಗಳಿಗೆ ಅನುಗುಣವಾಗಿ Employer's risks ಅಡಿ Compensation events ಆಗಿ ಪರಿಗಣಿಸಲು ಹಾಗೂ Force majeure ಅವಧಿಯಾಗಿ ಪರಿಗಣಿಸಿ, ಗುತ್ತಿಗೆದಾರರಿಗೆ / ರಿಯಾಯಿತಿದಾರರಿಗೆ / ಸರಬರಾಜುದಾರರಿಗೆ ಯಾವುದೇ ವೆಚ್ಚ ಅಥವಾ ದಂಡವಿಲ್ಲದೆ ಅವಧಿ ವಿಸ್ತರಣೆ ಮಾಡುವುದು.
- ಈ ರೀತಿ ವಿಸ್ತರಣೆ ಮಾಡಬೇಕಾದ ಅವಧಿಯನ್ನು ಆಯಾ ಸರಕು/ ಸೇವೆಯ ಸರಬರಾಜು ಮತ್ತು ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿನ ಪರಿಸ್ಥಿತಿಗಳನ್ನಾಧರಿಸಿ ನಿರ್ಧರಿಸತಕ್ಕದ್ದು.
- ದಿನಾಂಕ 19/02/2020 ರಂದು ಸಂಬಂಧಪಟ್ಟ ಯಾವುದೇ ಪಕ್ಷಗಾರರು (parties) ಗುತ್ತಿಗೆ ಒಪ್ಪಂದದ ಕಾರ್ಯವನ್ನು ನಿರ್ವಹಿಸುವಲ್ಲಿ ವಿಫಲ (Default) ವಾಗದಿದ್ದ ಪಕ್ಷದಲ್ಲಿ ಮಾತ್ರ, ಸದರಿ ಅವಧಿ ವಿಸ್ತರಣೆಯು ಅನ್ವಯವಾಗತಕ್ಕದ್ದು.
- ಕೋವಿಡ್-19 ಮಹಾಮಾರಿ ಹಿನ್ನೆಲೆಯಲ್ಲಿ ಸರ್ಕಾರದಿಂದ ಘೋಷಿಸಲಾದ ಲಾಕ್ ಡೌನ್ ಮತ್ತು ಅದಕ್ಕೆ ಸಂಬಂಧಪಟ್ಟ ನಿರ್ಬಂದಗಳ ಸಂಬಂಧದಲ್ಲಿ ಉಂಟಾದ ಅನಾನುಕೂಲತೆಗೆ ಮಾತ್ರ ಅನ್ವಯವಾಗುತ್ತದೆಯಲ್ಲದೆ, ಬೇರೆ ಯಾವುದೇ ಕಾರಣದಿಂದ ಉಂಟಾದ ವಿಳಂಬಕ್ಕೆ ಅಥವಾ ವಿಫಲತೆಗೆ ಅನ್ವಯವಾಗುವುದಿಲ್ಲ.
- ಮೇಲ್ಕಂಡಂತೆ ವಿಸ್ತರಿಸಲಾದ ಅವಧಿಯು ಸದರಿ ಅವಧಿಯ ನಂತರ ಸ್ವಯಂ ಆಗಿ ಮುಕ್ತಾಯವಾಗುತ್ತದೆ.

ಮುಂದುವರೆದಂತೆ, ಸರ್ಕಾರದ ಆದೇಶ/ಸುತ್ತೋಲೆಯನ್ವಯ ಭದ್ರತಾ ಠೇವಣಿ ಹಿಂಪಾವತಿ ಪ್ರಸ್ತಾವನೆಗಳನ್ನು ಪ್ರಕರಣವಾರು ಪರಿಶೀಲಿಸಿ, ಹಿಂಪಾವತಿ ಮಾಡಬೇಕಿದ್ದಲ್ಲಿ ಸೂಕ್ತ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಗಳನ್ನು ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆಗಾಗಿ ಸಲ್ಲಿಸಲು ಸೂಚಿಸಿದೆ.

**ಕೋವಿಡ್-19 ಮಹಾಮಾರಿಯ ಹಿನ್ನೆಲೆಯಲ್ಲಿ, ಮೇಲ್ಕಂಡ ಆದೇಶದ ಅನ್ವಯಿಕೆಯು ತಾತ್ಕಾಲಿಕವಾಗಿದ್ದು, ದಿನಾಂಕ 20/02/2020 ರಿಂದ 6 ತಿಂಗಳ ಅವಧಿಗೆ ಮಾತ್ರ ಸೀಮಿತವಾಗಿರುತ್ತದೆ.**

**ಆದೇಶದ ಮೇರೆಗೆ**

2/11/2020

ಉಪ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ)
ಕವಿಪ್ರನಿನಿ, ಬೆಂಗಳೂರು.

**ಪ್ರತಿಗಳು:-**

1. ಎಲ್ಲಾ ಮುಖ್ಯ ಇಂಜಿನಿಯರುಗಳು (ವಿ), ಕವಿಪ್ರನಿನಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ.
3. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
4. ಎಲ್ಲಾ ಅಧೀಕ್ಷಕ ಇಂಜನಿಯರ್ (ವಿ)/ (ಸಿವಿಲ್), ಕವಿಪ್ರನಿನಿ.
5. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
6. ಅಧೀಕ್ಷಕ ಇಂಜಿನಿಯರ್ (ವಿ), (ಐಟಿ ಮತ್ತು ಎಂಐಎಸ್) – ನಿಗಮದ ಅಂತರ್ಜಾಲದಲ್ಲಿ ಪ್ರಕಟಿಸಲು
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರುಗಳು (ವಿ)/ (ಸಿವಿಲ್), ಕವಿಪ್ರನಿನಿ.
8. ಎಲ್ಲಾ ಉಪಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
9. ಲೆಕ್ಕಾಧಿಕಾರಿ (ಕೋಡಿಫಿಕೇಷನ್), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
10. ವ್ಯವಸ್ಥಾಪಕ ನಿರ್ದೇಶಕರು/ ನಿರ್ದೇಶಕರು (ಹಣಕಾಸು)/ ನಿರ್ದೇಶಕರು (ಪ್ರಸರಣ)/ ನಿರ್ದೇಶಕರು (ಆ ಮತ್ತು ಮಾ. ಸಂ) ರವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.